ಅಂದಾನಯ್ಯ ಆಗಿಂದಾಗಲೇ ಹೈದನೊಬ್ಬ ಹಣೆಗೆ ಕುಂಕುಮ ಅರಿಸಿನ ಹಚ್ಚಿದ್ದ, ಕತ್ತಿಗೆ ಹೂವಿನ ಸರ ಇಳಿಬಿಟ್ಟಿದ್ದ ಆಡೊಂದನ್ನು ದರದರನೆ ಪೂಜಾರಯ್ಯನವರ ಮುಂದೆ ಎಳೆದುಕೊಂಡು ಬಂದ. ಅಲ್ಲೇ ನಿಂತಿದ್ದವನೊಬ್ಬ ಆಡಿನ ತಲೆಯ ಮೇಲೆ ನೀರು ಚಿಮುಕಿಸಿದ. ಅದು ತಲೆ ಒದರಲಿಲ್ಲ. ಇನ್ನೊಂದು ಸರ್ತಿಯೂ ನೀರು ಚಿಮ್ಮಲು ಆಡು ತಲೆ ಒದರಲೇ ಇಲ್ಲ.

ದೊಡ್ಡತಮ್ಮಯ್ಯ 'ಒಪ್ಪಿಸ್ಕಬೇಕು ತಾಯಿ ಕಾಣಿಕನ' ಅಂದರು. ತಾಯಿಯಿದ್ದು 'ಕಾಣಿಕೆ ಮೈಲ್ಗೆಯಾಗದೆ' ಅನ್ನಲು 'ಅವ್ವ ಆಥರ ಮಡಿ ಕೆಡಿಸ್ದವರು ಯಾರು ಅಂತ್ಲಾರು ಹೇಳು ತಾಯಿ' ಅಂದು ಕೈಮುಗಿದರು.

'ಮಗನೇ ಗ್ರಾಮದಲ್ಲಿ ಕದನಕಲಹವೇನೂ ಇಲ್ಲ, ಇಲ್ದಿದ್ರೂ ರಂಡೆಮುಂಡೇರು ಸೇರ್ಕಂಡು ಊರ್ನೆಲ್ಲ ಒಂದ್ ಮಾಡ್ತಾವ್ರೆ.'

ಕುಂಟರಂಗಪ್ಪ ಅಲ್ಲೇ ಹಿಡಿದು ನಿಲ್ಲಿಸಿಕೊಂಡಿದ್ದ ಮಾದೇವಿಯನ್ನು ಪೂಜಾರಯ್ಯನ ಕಾಲಿಗೆ ತಳ್ಳಿದ. ದೊಡ್ಡತಮ್ಮಯ್ಯನವರು ಅವಳ ಕೈಯ್ಯ ಕಾಣಿಕೆಯ ತಾಯಿಯ ಪಾದಕ್ಕಿರಿಸಿ ಅಡ್ಡಬಿದ್ದು ತಪ್ಪು ಒಪ್ಪಿಕೊಳ್ಳುವಂತೆ ಗದರಿದರು.

ಪೂಜಾರಯ್ಯ ಕೈಯಲ್ಲಿದ್ದ ಬೆತ್ತದಿಂದ ಬಿದ್ದ ಮಾದೇವಿಯ ಬೆನ್ನಿಗೆ ಇಡುಮಿದರು. ಏಟು ತಡೆಯದೆ ಮಾದೇವಿ ಒದ್ದಾಡಿದಳು. ಮೇಲೇ ಇನ್ನೊಂದು ಏಟು ಬಿತ್ತು. ಗಿರಿಯನೊಡನೆ ನಿಂತಿದ್ದ ನನಗೆ ಇನ್ನೇನು ಮಾದೇವಿ ಮೂರ್ಛೆ ಬೀಳುವಳೆನಿಸಿತು. ಅಥವಾ ಗರ್ಭ ತುಂಬುತ್ತಿರುವವಳಿಗೆ ಇನ್ನೇನಾದರೂ ಆಗಬಹದೆನ್ನಿಸಿ 'ಅವಳ ಕರ್ಕಂಡು ಬಾ' ಎಂದು ಗಿರಿಯನನ್ನು ಕಳಿಸಿದೆ. ದೃಢಕಾಯನಾಗಿದ್ದರೂ ಗಿರಿಯನು ಸುತ್ತಣ ಗುಂಪಿಗೆ ಅಳುಕುತ್ತಲೇ ನಿಧಾನವಾಗಿ ಮಾದೇವಿಯತ್ತ ಹೋದ.

ಮಾದೇವಿ ಮೂರ್ಛೆ ಬೀಳಬಹುದೆಂದುಕೊಂಡಿದ್ದ ನನಗೆ ಆಶ್ಚರ್ಯವಾಯಿತು. ಎರಡನೇ ಏಟು ತಿಂದವಳು ದಢಾರನೆ ಎದ್ದಳು. ಕಣ್ಣು ಕೆಂಪಾಗಿ, ಹಲ್ಲು ಕಡಿದು, ಅದುರುತ್ತಿದ್ದವಳ ಮಂಡೆಕೂದಲು ಕೆದರಿ, ಪೂಜಾರಯ್ಯನಿಗೆ ಆವಾಹನೆಯಾಗಿದ್ದ ದೇವತೆ, ಮಾದೇವಿಯ ಮುಟ್ಟಿಕೊಂಡಿತೋ ಎಂದು ಎಲ್ಲ ಭಾವಿಸಿದರು. ಅಷ್ಟು ಹೊತ್ತಿಗೆ ಗಿರಿಯ ಅವಳ ಹತ್ತಿರ ಹೋಗಿ ನಿಂತರೆ ಅವನ ಕಾಲು ತುಳಿದು ತಳ್ಳಿದಳು. ಅವನ ಕಾಲು ಮೆಟ್ಟು ಕಾಲಲ್ಲಿ ಸಿಕ್ಕಿಕೊಂಡು ಗಿರಿಯ ಅತ್ತ ವಾಲಿದ. ಮಾದೇವಿ ಮೆಟ್ಟು ಹಿಡಿದುಕೊಂಡು ನಿಂತಳು. ನನಗೆ ಅವಳ ಅವತಾರ ನೋಡಿ ದಿಗ್ಭ್ರಮೆಯಾಯಿತು. ಪೂಜಾರಯ್ಯ ದೊಡ್ಡತಮ್ಮಯ್ಯ ಮುಂತಾದವರ ಎದುರಿಗೆ ಮೆಟ್ಟು ಹಿಡಿದು ನಿಂತವಳನ್ನೂ, ಅವಳಿಗೆ ಬೆಂಬಲವಾಗಿ ನಿಂತ ನನ್ನನ್ನೂ, ಗಿರಿಯನನ್ನೂ ನೆರೆದ ಜನವೆಲ್ಲ ಸೇರಿಕೊಂಡು ಜೀವಸಮಾಧಿ ಮಾಡಿಬಿಡಬಹುದೆನಿಸಿತು. ಊರಾಚೆಯ ದಾರಿ ನೋಡಿದೆ. ಒಂದು ವೇಳೆ ಸಲಗನ ವೊಡ್ಡಿಂದ ಪೊಲೀಸು ಬರುತ್ತಿರಬಹುದೇ ಎಂದು.

ಆಡಿನ ಮರಿ ಹಿಡಿದು ನಿಂತಿದ್ದ ಹೈದ ಸ್ವಲ್ಪ ಕೈ ಸಡಿಲ ಮಾಡಲು ಆಡು ಕಸಕ್ಕನೆ ತಪ್ಪಿಸಿಕೊಂಡು ಎತ್ತಲೋ ಓಡಿತು. ಪೂಜಾರಯ್ಯ ಕೈಯ್ಯ ಬೆತ್ತ ಬಿಸಾಡಿ 'ಸದ್ದು ಕೆಟ್ಟೋಯ್ತೋ' ಅಂದು ಗುಡಿಯ ಗರ್ಭಾಂಕಣದತ್ತ ನಡೆದರು. ಊರ ಹೀರೆಕರೆಲ್ಲ ತಾಯಿಯ ಹಬ್ಬ ಮೈಲಿಗೆಯಾಯಿತೆಂದು ಸಿಟ್ಟುಗೊಂಡರು. ಸಿಟ್ಟುಗೊಂಡರಾದರೂ ಒಂದು ವೇಳೆ ಗ್ರಾಮದೇವತೆ ಮಾದೇವಿಯ ಮೈಯ್ಯನ್ನೇ ಹೊಕ್ಕಳೇ ಎಂಬ ಅನುಮಾನ ಹತ್ತಿ ಗುಡಿಯ ಅಂಗಳ ಖಾಲಿ ಮಾಡತೊಡಗಿದರು. ತಂತಮ್ಮ ಕೇರಿಯ ಕಡೆ ನಡೆಯುತ್ತ ಜನ 'ಪೂಜಾರಪ್ಪ ಮೈಮ್ಯಾಲೆ ದೇವ್ರೆ ಬಂದಿದ್ರ ಹಂಗ್ಯಾಕಯ್ಯ ಆ ಹೆಣ್ಣೆಂಗ್ಸಿಗೆ ಹೆದರ್ಕಂಡು ಹೋಗ್ಬೇಕಿತ್ತು, ಗೌಡ್ರು, ಅಂದಾನಯ್ಯನೂ ಜಾಗ